


# ಭಗವಂತನ ಸ್ವರೂಪ

ಆಧ್ಯಾತ್ಮಿಕ ಹಾದಿ ಒಂದು ರೀತಿಯಲ್ಲಿ ಕತ್ತಲಲ್ಲಿ ಪರದಾಡಿದಂತೆ. ಏನೂ ಕಾಣಿಸುತ್ತಿಲ್ಲ; ಏನೂ ಕಾಣದೆ ಸುಮ್ಮನೆ ನಿಂತರೆ ಕತ್ತಲೆ ಮಾಯವಾಗುವುದಿಲ್ಲ. ಮುಂದಕ್ಕೆ ಚಲಿಸಲೇಬೇಕು. ಕಣ್ಣೆಂಬ ಇಂದ್ರಿಯ ವಿಫಲವಾದಾಗ ಕೈ ಕೆಲಸಮಾಡುತ್ತದೆ. ಪರದಾಡುವಾಗಲೂ ಅಪಾಯ ತಪ್ಪಿದ್ದಲ್ಲ. ಏನಾದರೊಂದು ಆಧಾರ ಸಿಕ್ಕಿದರೆ ಸಾಕೆಂದು ಪರಿತಪಿಸುತ್ತೇವೆ. ಆಧ್ಯಾತ್ಮಿಕ ಜಗತ್ತಿನಲ್ಲೂ ಹೀಗೆಯೇ. ನಮಗೇನೂ ಆಧ್ಯಾತ್ಮಿಕ ಅನುಭವವಾಗಿಲ್ಲ. ಈಗ ಉಂಟಾಗುತ್ತಿರುವ ಅನುಭವ ಪ್ರಪಂಚವೆಲ್ಲ ನಮ್ಮ ಅರಿವನ್ನು ಮುಸುಕಿಬಿಟ್ಟಿದೆ. ಸಾಗಬೇಕಾದ ಗುರಿ ಎಷ್ಟು ದೂರ, ಯಾವ ದಿಕ್ಕಿನಲ್ಲಿ ಸಾಗಬೇಕು, ಹೇಗೆ ಸಾಗಬೇಕು, ಎಲ್ಲಿ ಎಡವಿ ಬೀಳುವ ಸಾಧ್ಯತೆಯಿದೆ — ಇದೊಂದೂ ಗೊತ್ತಿಲ್ಲದೆ, ಕತ್ತಲಲ್ಲಿ ಪ್ರಯಾಣ ಹೊರಟಂತೆ ದೇವರನ್ನರಸಿ ಹೊರಟಿದ್ದೇವೆ. ಯಾರೋ ಹೇಳಿದ, ಎಲ್ಲೋ ಕೇಳಿದ ಅಥವಾ ಇನ್ನೆಲ್ಲೋ ಓದಿದ ಅರಿವು ಮಾತ್ರ ನಮ್ಮ ದಾರಿದೀಪ. ಅದೆಷ್ಟು ವಿಶ್ವಾಸಾರ್ಹವೋ, ಎಲ್ಲಿಯತನಕ ದೀಪದ ಎಣ್ಣೆ ಉಳಿಯವುದೋ ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಯಾನ, ಅಜ್ಞಾತ ನೆಲೆಯ ಶೋಧ ಆರಂಭವಾಗಿದೆ. ಯಾವಾಗ ಗುರಿ ತಲುಪುವೆವೋ, ಅಥವಾ ನಿಜವಾಗಿ ಗುರಿ ತಲುಪುವೆವೋ ಇಲ್ಲವೋ – ಗೊತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿರುವ ಸಾಧಕನು ಈ ಹಿಂದೆ ಆಧ್ಯಾತ್ಮಿಕ ಅನುಭವಗಳನ್ನು ಪಡೆದ ಮಹಾತ್ಮರ ಮಾತುಗಳನ್ನು ಪರಿಶೀಲಿಸುವುದರಿಂದ ವಿಶೇಷ ಪ್ರಯೋಜನವಿದೆ.

## ಭಗವಂತನ ಸ್ವರೂಪ : ಅದು ಅನಿರ್ವಚನೀಯ

ಆಶ್ಚರ್ಯದ ಸಂಗತಿಯೆಂದರೆ, ದೇವರನ್ನು ಕಾಣದ ಹಾಗೂ ಅರಿಯದ ನಾವು ಅವನನ್ನು ಕುರಿತು ಅನುಭವದ ಮಾತಾಗಿ ಹೇಗೆ ಏನನ್ನೂ ಹೇಳಲಾರೆವೋ, ಅದೇ ರೀತಿ ದೇವರನ್ನು ಕಂಡವರೂ ಏನೊಂದನ್ನೂ ಹೇಳಲಾಗದು! ಪ್ರಪಂಚದ ಧಾರ್ಮಿಕ–ಆಧ್ಯಾತ್ಮಿಕ ಇತಿಹಾಸವನ್ನು ಅವಲೋಕಿಸಿದರೆ, ಆಧ್ಯಾತ್ಮಿಕ ಸತ್ಯಗಳನ್ನು ಕಂಡು ಅನುಭವಿಸಿದ ಅಥವಾ ದೇವರನ್ನು ಕಂಡದ್ದಾಗಿ ಹೇಳಿದ ಮಹಾತ್ಮರುಗಳಲ್ಲಿ ಹಲವರ ಹೆಸರುಗಳು ಕೇಳಿಬರುತ್ತವೆ. ಅವರೆಲ್ಲ ತಮಗಾದ ದರ್ಶನ, ಅನುಭವಗಳನ್ನು ಮಾತಿನ ಮೂಲಕ ವಿವರಿಸಲು ಪ್ರಯತ್ನಪಟ್ಟಿದ್ದಾರೆ. ಇಲ್ಲಿ 'ಪ್ರಯತ್ನಪಟ್ಟಿದ್ದಾರೆ' ಎಂಬುದು ಬಹಳ ಮುಖ್ಯ. ಏಕೆಂದರೆ ಎಲ್ಲ ಮಹಾತ್ಮರ, ಎಲ್ಲ ಶಾಸ್ತ್ರಗಳ, ಎಲ್ಲ ಧರ್ಮಗಳ ಏಕಾಭಿಪ್ರಾಯವೇನೆಂದರೆ: ದೇವರಿರುವುದು ಸತ್ಯವಾದರೂ, ದೇವರನ್ನು ಕಾಣುವುದು ಸಾಧ್ಯವಾದರೂ, ಅವನು ಹೇಗಿದ್ದಾನೆ ಎಂಬುದನ್ನು ಮಾತಿನ ಮೂಲಕ ವರ್ಣಿಸಲಾಗದು. 'ದೇವರನ್ನು ಕಂಡರೂ ವರ್ಣಿಸಲಾಗದು' ಎಂಥ ಮಾತು! ಈ ಮಾತಿನ ಹಿಂದಿರುವ ತಾರ್ಕಿಕ ಬಿಕ್ಕಟ್ಟನ್ನು ಅರಿತುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಹಲವೆಡೆ ಕೇಳಿಬರುವ ಇಂಥ ಕೆಲವು ಮಾತುಗಳನ್ನು ಮೊದಲು ಗಮನಿಸೋಣ.

'ಅಲ್ಲಿಗೆ ಕಣ್ಣು ಹೋಗುವುದಿಲ್ಲ , ಮಾತು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ. ಇದನ್ನು ನಾವರಿಯೆವು, ಇದನ್ನು ಹೇಗೆ ತಿಳಿಸಬೇಕೋ ಅರಿಯುವೆವು. ನಾವು ಏನು ತಿಳಿದಿದ್ದೇವೋ ಏನು ತಿಳಿದಿಲ್ಲವೋ ಅದೆಲ್ಲಕ್ಕಿಂತಲೂ ಅದು ಬೇರೆಯೇ ಆಗಿದೆ' ಎಂದು ಕೇನೋಪನಿಷತ್ತು ಹೇಳುತ್ತದೆ.[೧] 'ಯಾವುದರಿಂದ ಮಾತುಗಳು ಮನಸ್ಸಿನೊಂದಿಗೆ ಅದನ್ನು ಹೊಂದಲಾರದೆ ಹಿಂದಿರುಗುವುದೋ' ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ.[೨] ಇದೇ ರೀತಿ ಇತರ ಉಪನಿಷತ್ತುಗಳಲ್ಲಿ ಬ್ರಹ್ಮದ ಸ್ವರೂಪವನ್ನು ಹೇಳುವಾಗ 'ಅನಿರ್ದೇಶ್ಯಂ' ('ಇದು ಹೀಗೆ ಎಂದು ನಿರ್ದೇಶಿಸಿ ಹೇಳಲಾಗದು') 'ಅವ್ಯಪದೇಶ್ಯಂ' (ವಿವರಿಸಿ ಹೇಳಲಾಗದಂಥದು) ಎಂದೆಲ್ಲ ಹೇಳಲಾಗಿದೆ. ಬ್ರಹ್ಮವನ್ನು ಕುರಿತು ಮಾತಿನಲ್ಲಿ ಹೇಳಬಹುದಾದ್ದೆಂದರೆ ಇಷ್ಟೆ: 'ಅದನ್ನು ಕುರಿತು ಏನೂ ಹೇಳಲಾಗದು'

---

೧ ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥
ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ। *(ಕೇನೋಪನಿಷತ್ತು, ೧.೩–೪)*

೨ ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
*(ತೈತ್ತಿರೀಯ ಉಪನಿಷತ್ತು, ೨.೪)*

ಎಂದು. ಆದರೆ ಎಲ್ಲೆಡೆ '**ವಿದಿತ್ವಾ**' (ಅಂದರೆ 'ಅರಿತುಕೊಂಡು') '**ವಿದ್ವಾನ್**' ('ಅರಿತುಕೊಂಡವನು') '**ಯೋ ವೇದ**' ('ಯಾರು ತಿಳಿದಿದ್ದಾನೋ') ಎಂಬ ಮಾತುಗಳು ಹೇರಳವಾಗಿ ಬರುತ್ತವೆ. ಇಲ್ಲೆಲ್ಲ ಬ್ರಹ್ಮನನ್ನು ಅರಿತುಕೊಳ್ಳುವಯದು ಎಂದರೆ ಮನಸ್ಸು, ಬುದ್ಧಿ, ತರ್ಕಗಳ ಮೂಲಕ ಅರಿತಿದ್ದಾನೆ ಎಂದರ್ಥವಲ್ಲ ; ಅನುಭವಿಸಿ ಕಂಡುಕೊಂಡಿದ್ದಾನೆ — ಅದೂ ಇಂದ್ರಿಯ, ಮನಸ್ಸು, ಬುದ್ಧಿ ಇತ್ಯಾದಿಗಳಿಗೆ ಮೀರಿದ ಒಂದು ಅನುಭವವನ್ನು ಪಡೆದಿದ್ದಾನೆ ಎಂದೇ ಅರ್ಥ. ಆದ್ದರಿಂದ ಬ್ರಹ್ಮವನ್ನು, ಆತ್ಮವನ್ನು, ಅನುಭವ ಮಾಡಿಕೊಳ್ಳಬಹುದು; ಆದರೆ ಆ ಅನುಭವವನ್ನು ಮಾತಿನ ಮೂಲಕ ವಿವರಿಸಿ ಹೇಳಲಾಗದು — ಇದು ಒಟ್ಟು ಅಭಿಪ್ರಾಯ.

ಇನ್ನು ನಮ್ಮ ಶಾಸ್ತ್ರಗ್ರಂಥಗಳಲ್ಲಿಯೂ, ಸಾಧುಸಂತರ ನುಡಿಗಳಲ್ಲಿಯೂ ಕಂಡುಬರುವ ಭಗವಂತನ ವರ್ಣನೆಗಳಿಗೆ ಮಿತಿಯಿಲ್ಲವಲ್ಲ? ರಾಶಿರಾಶಿ ಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿರುವ ದೇವರ ವಿಷಯವೆಲ್ಲ ವ್ಯರ್ಥವೆ, ಹಾಗಾದರೆ? ಒಂದೊಂದು ಸ್ತೋತ್ರ, ಹಾಡು, ಕೀರ್ತನೆ, 'ಸಹಸ್ರನಾಮ'ಗಳಲ್ಲೆಲ್ಲ ಬಗೆಬಗೆಯಾಗಿ ದೇವರ ವರ್ಣನೆ, ವಿವರಣೆ ಮಾಡಿದ್ದೆಲ್ಲ ಏನು? — ಈ ರೀತಿಯ ಪ್ರಶ್ನೆ ಕೇಳಬಹುದು. ನಿಜ, ಇಂಥ ಸಾಹಿತ್ಯಗಳಿಗೆ ಕೊನೆಯಿಲ್ಲ. ಆದರೆ ಅವುಗಳಲ್ಲಿ ಬಹುಪಾಲು ಸ್ತುತಿ, ಪ್ರಾರ್ಥನೆ, ನಾಮ ವೈವಿಧ್ಯಗಳು; ಅಥವಾ ನಿಷೇಧಾತ್ಮಕವಾದ (ಅಂದರೆ 'ಹೀಗಲ್ಲ', 'ಇದಲ್ಲ', 'ಇದರ ಆಚೆಗಿನದು' ಎಂಬಂತಹ) ವಿವರಣೆಗಳೇ ಅಧಿಕ. ಹೆಚ್ಚೆಂದರೆ ವೇದ, ಉಪನಿಷತ್ತು ಹಾಗೂ ಇತರ ಶಾಸ್ತ್ರ ಗ್ರಂಥಗಳ ಮರುನುಡಿ ಅಷ್ಟೇ ಇವೆ. ಖಚಿತವಾಗಿ ಭಗವಂತನ ಸ್ವರೂಪ ಹೀಗೆ ಎಂಬ ವಿವರಣೆ ಕಡಿಮೆ; ಇದ್ದರೂ ಅವು ಕಾವ್ಯಾತ್ಮಕವಾಗಿರುತ್ತವೆ, ಅಷ್ಟೆ.

ಶ್ರೀರಾಮಕೃಷ್ಣರು ಸಮಾಧಿಯಲ್ಲಿ ತಮಗಾದ ಅನುಭವವನ್ನು ತಮ್ಮ ಶಿಷ್ಯಂದಿರಿಗೆ ವಿವರಿಸಿ ಹೇಳಲು ಪ್ರಯತ್ನಿಸಿ, ಇನ್ನೇನು, 'ಸಮಾಧಿಯಲ್ಲಿ ಹೀಗಾಗುತ್ತದೆ' ಎನ್ನುವಷ್ಟರಲ್ಲಿ ಅವರ ಮನಸ್ಸು ಎಲ್ಲ ಪ್ರಾಪಂಚಿಕ ಮಿತಿಗಳನ್ನು ಮೀರಿ ಹೋಗಿ, ಕೂಡಲೇ ಅವರು ಸಮಾಧಿಯಲ್ಲಿ ಲಯವಾಗಿಬಿಡುತ್ತಿದ್ದರು. ಸಮಾಧಿಯಿಂದಿಳಿದು, ಕಣ್ಣೀರಿಸುತ್ತಾ ಅವರು ಹೇಳುತ್ತಿದ್ದರು: ''ನಾನೇನೂ ಹೇಳದಂತೆ ಜಗನ್ಮಾತೆ ನನ್ನ ಕತ್ತನ್ನು ಒತ್ತಿ ಹಿಡಿದು ಬಿಡುತ್ತಾಳೆ.'' ಬ್ರಹ್ಮನ ಅನಿರ್ವಚನೀಯತೆಯನ್ನು ಅವರು ವಿವರಿಸುವ ರೀತಿ ಹೀಗೆ.

ದೇವರ ನಿಜಸ್ವರೂಪ ನಮ್ಮ ಇಂದ್ರಿಯ, ಮನಸ್ಸು, ಬುದ್ಧಿಗಳಿಗಿಂತ ಎಷ್ಟೋ ಪಟ್ಟು ಸೂಕ್ಷ್ಮವಾದುದು; ಔನ್ನತ್ಯದಲ್ಲಿ ಯಾವ ಎಣಿಕೆಗೂ ನಿಲುಕದ್ದು. ಹಾಗಿರುವಾಗ, ಅತಿಸೂಕ್ಷ್ಮವಾದ ಪರಮಾಣುವನ್ನು ನಮ್ಮ ಕಣ್ಣು ಹೇಗೆ ನೋಡಲಾರದೋ ಹಾಗೆ - ಎಲ್ಲ ಸೂಕ್ಷ್ಮ ವಸ್ತುಗಳಿಗಿಂತಲೂ ಸೂಕ್ಷ್ಮವಾಗಿರುವ ಭಗವಂತನನ್ನು ನಮ್ಮ ಯಾವ ದೈಹಿಕ ಯಂತ್ರಗಳೂ ಗ್ರಹಿಸಲಾರವು. ಇಂಥ ಸನ್ನಿವೇಶದಲ್ಲಿ, ಮನಸ್ಸಿನ ಮೂಲಕ ನಡೆಯುವ ಮಾತಿನ ಮೂಲಕ ಭಗವಂತನನ್ನು ಹೇಗೆ ವಿವರಿಸಲಾದೀತು? ಅಂಥ ಭಗವಂತನನ್ನು ಕಾಣಲು ಸಾಮಾನ್ಯ ಕಣ್ಣು, ಸಾಮಾನ್ಯ ಮನಸ್ಸು ಸಾಲದು. ವಿಶೇಷ ಮನಸ್ಸು , ವಿಶೇಷ ಬುದ್ಧಿ ಬೇಕು. ಅಂಥ ಹೊಸ ದೃಷ್ಟಿ ಬರಬೇಕಾದರೆ ಆಧ್ಯಾತ್ಮಿಕ ಸಾಧನೆ ಅಗತ್ಯ; ದೈಹಿಕ-ಮಾನಸಿಕ ಪರಿಶುದ್ಧತೆ ಅಗತ್ಯ. ಆದ್ದರಿಂದ 'ಬ್ರಹ್ಮವು ಅನಿರ್ವಚನೀಯ' ಎನ್ನಲಾಗಿದೆ — ಸಾಮಾನ್ಯ ಇಂದ್ರಿಯ, ಮನಸ್ಸುಗಳಿಗೆ ನಿಲುಕಲಾರದ ವಸ್ತು ಎನ್ನಲಾಗಿದೆ.

## ಅನಂತತೆ

ಯಾವುದೇ ಬಗೆಯ ಅಳತೆಗೆ ನಿಲುಕದ, ಎಲ್ಲವನ್ನೂ ಮೀರಿದ ಅಸ್ತಿತ್ವವನ್ನು ಹೊಂದಿರುವ, ವಸ್ತುವನ್ನು 'ಅನಂತ' ಎನ್ನುವುದು ವಾಡಿಕೆ. ಮಾತು, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನು ಮೀರಿದ ಸತ್ಯವೇ ಭಗವಂತ; ಅವನ ಗುಣ, ಲಕ್ಷಣ ಇಂಥದು ಎಂದು ವಿವರಿಸಲು ಸಾಧ್ಯವಿಲ್ಲ ಎಂದಿದ್ದರೂ, ಅವನನ್ನು 'ಅನಂತ'ವೆಂದು ಕೆಲವೆಡೆ ವಿವರಿಸಿದ್ದನ್ನು ಕಾಣುತ್ತೇವೆ.[೩] ಕಾಲದ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ, ವಸ್ತುವಿನ ದೃಷ್ಟಿಯಿಂದ ವಿಭಜಿಸಲಾಗದ ಹಾಗೂ ಆದಿ-ಅಂತ್ಯಗಳಿಲ್ಲದ ವಸ್ತುವನ್ನೇ ಅನಂತವೆನ್ನಬೇಕು. ಅಂಥ ವಸ್ತು ಬ್ರಹ್ಮವೊಂದೇ; ಆದ್ದರಿಂದ ಅದೇ ಅಂತಿಮ ಸತ್ಯವೆಂದೂ, ಅದಕ್ಕೆ ಹೊರತಾದ ಇತರ ವಸ್ತುಗಳೆಲ್ಲವೂ ನಶ್ವರವಾದ್ದರಿಂದ ಅನಾತ್ಮವೆಂದೂ ತಿಳಿಯಬೇಕು. ಹೀಗೆ ಪರಮಾತ್ಮನ ಲಕ್ಷಣವನ್ನು ಅನಂತವೆನ್ನಲಾಗಿದೆ.

ಅನಂತವನ್ನು ವಿವರಿಸಲಾಗುವುದಿಲ್ಲ ಎಂಬುದು ನಿಜ. ಆದರೆ ಚಮತ್ಕಾರದ ಮಾತಿನ ಮೂಲಕ ಅದನ್ನು *ಸೂಚಿಸ*ಬಹುದು! ಕಾವ್ಯದ ಭಾಷೆಯಲ್ಲಿ ಈ ಪ್ರಯತ್ನವನ್ನು ಮಾಡುತ್ತವೆ ಉಪನಿಷತ್ತುಗಳು. 'ಅದು(ಅಂದರೆ ಬ್ರಹ್ಮವು, ಅಥವಾ ಪರಮಾತ್ಮನು) ಚಲಿಸುವುದಿಲ್ಲ, ಏಕವಾಗಿದೆ, ಮನಸ್ಸಿಗಿಂತ ವೇಗವಾಗಿದೆ, ಇಂದ್ರಿಯಗಳಿಗಿಂತ ವೇಗವಾಗಿ ಚಲಿಸಿ, ಅವು ತಲುಪುವ ಮೊದಲೇ ಅಲ್ಲಿದ್ದುಬಿಡುತ್ತದೆ. ಅದು ಚಲಿಸುತ್ತದೆ ಎಂದರೆ ಚಲಿಸುತ್ತದೆ; ಇಲ್ಲ ಎಂದರೆ ಇಲ್ಲ. ಅದು ದೂರ ಎಂದರೆ ಅತ್ಯಂತ ದೂರ, ಹತ್ತಿರ ಎಂದರೆ ಅತ್ಯಂತ ಹತ್ತಿರ. ಒಳಗಿದೆ ಎಂದರೆ ಎಲ್ಲದರ ಒಳಗಿದೆ; ಹೊರಗಿದೆ ಎಂದರೆ ಎಲ್ಲದರ ಹೊರಗಿದೆ'[೪] ಎಂಬ ಈ ವಿವರಣೆ ಅದೇ ರೀತಿ ಅನಂತವನ್ನು ಮಾತಿನ ಮೂಲಕ ಹಿಡಿದಿಡುವ, ಕಾವ್ಯಾತ್ಮಕವಾದ ಪ್ರಯತ್ನವಷ್ಟೇ. ನಮ್ಮ ಜೀವನ ಸರ್ವಸ್ವವನ್ನೂ ಮುಡಿಪಾಗಿಟ್ಟು ಆಧ್ಯಾತ್ಮಿಕ ಸಾಧನೆ ಮಾಡುವವನಿಗೆ ಮಾತ್ರ ಭಗವಂತನ ಅನಂತ ಅಸ್ತಿತ್ವದ ಅರಿವು ನಿಜವಾಗಿಯೂ ಉಂಟಾಗುವುದು ಎನ್ನುತ್ತದೆ ಉಪನಿಷತ್ತು. ಅಂಥ ಅರಿವು ಹಾಗೂ ಅನುಭವ ಬೇರೆಯಲ್ಲ.

ಶ್ರೀರಾಮಕೃಷ್ಣರು ಒಂದು ಉದಾಹರಣೆಯನ್ನು ಕೊಡುತ್ತಾರೆ: ''ಉಪ್ಪಿನ ಬೊಂಬೆ ಒಮ್ಮೆ ಸಮುದ್ರದ ಆಳವನ್ನು ಕಂಡುಹಿಡಿ

೩ **ಸತ್ಯಂ ಜ್ಞಾನಂ ಅನಂತಂ ಬ್ರಹ್ಮ ।** *(ತೈತ್ತಿರೀಯೋಪನಿಷತ್ತು, ೨.೧)*
೪ **'ಅನೇಜದೇಕಂ..' ಇತ್ಯಾದಿ.** *(ಈಶಾವಾಸ್ಯೋಪನಿಷತ್ತು , ೪-೫)*

ಯಲು ಹೋಯಿತು. ಅದರ ಆಳ ಎಷ್ಟಿದೆ ಎಂಬುದನ್ನು ಪರರಿಗೆ ತಿಳಿಸಬೇಕು ಅಂತ ಅದು ಮನಸ್ಸು ಮಾಡಿಕೊಂಡಿತ್ತು. ಆದರೆ ಅದಕ್ಕೆ ಹಾಗೆ ಮಾಡಲು ಸಾಧ್ಯವೇ ಆಗಲಿಲ್ಲ. ಇಳಿಯುವುದೇ ತಡ, ಕರಗಿಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಉಳಿದುಕೊಂಡಿರುವವರು ಯಾರು?''[೫]

ಅನಂತದ ಸ್ಪರ್ಶವನ್ನು ಪಡೆದವನು ಅನಂತವೇ ಆಗುತ್ತಾನೆ; ಬ್ರಹ್ಮನನ್ನು ಕಂಡವನು ಬ್ರಹ್ಮವೇ ಆಗುತ್ತಾನೆ ಎಂಬುದು ವೇದಗಳ ಮಾತು. ಈ ಕಾರಣಕ್ಕೆ ಶ್ರೀರಾಮಕೃಷ್ಣರು ಹೇಳುತ್ತಾರೆ, ''ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಚಿಷ್ಟವಾಗಿ ಹೋಗಿವೆ — ವೇದ, ಪುರಾಣ, ತಂತ್ರ, ಷಡ್ದರ್ಶನ ಎಲ್ಲಾ. ಇವೆಲ್ಲಾ ಬಾಯಿಂದ ಹೊರಹೊಮ್ಮಿರುವುದರಿಂದ, ನಾಲಗೆ ಉಚ್ಚರಿಸುವುದರಿಂದ ಉಚ್ಚಿಷ್ಟವಾಗಿದೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಚಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರಿಗೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ.''[೬]

### ಖಚಿತವಾದ ಜ್ಞಾನ

ಭಗವದ್ದರ್ಶನವನ್ನು ಪಡೆದವರು ಹೇಳುವ ಒಂದು ಅಭಿಪ್ರಾಯ ಎಲ್ಲೆಡೆ ಸಮಾನವಾಗಿದೆ: ಅವರ ಅರಿವು, ಅತೀತವಾದ ಜ್ಞಾನ ವಿಶೇಷವಾದದ್ದು. ಅದನ್ನು ಅರಿತವರು ಇನ್ನೇನನ್ನೂ ಅರಿಯಬೇಕಾಗಿಲ್ಲ, ಅವರಿಗೆ ಎಲ್ಲ ಜ್ಞಾನವೂ ಒದಗಿಬರುತ್ತದೆ. ಅಷ್ಟೇ ಅಲ್ಲ , ಅವರ ತಿಳುವಳಿಕೆ ಖಚಿತವಾದ ಹಾಗು ಸ್ಪಷ್ಟವಾದ ತಿಳುವಳಿಕೆ. 'ಬ್ರಹ್ಮಜ್ಞಾನವನ್ನು ಹೊಂದಿದವನು ತಪ್ಪುಹೆಜ್ಜೆಯನ್ನು ಎಂದಿಗೂ ಇಡಲಾರ' ಎನ್ನುತ್ತಿದ್ದರು, ಶ್ರೀರಾಮಕೃಷ್ಣರು. ಅವರ ಮನಸ್ಸು, ಬುದ್ಧಿ, ಇಂದ್ರಿಯಗಳೆಲ್ಲ ಆತ್ಮದರ್ಶನದಿಂದಾಗಿ ಪರಿಶುದ್ಧಗೊಂಡಿರುತ್ತವೆ. ಆದ್ದರಿಂದ ಅವರು ಎಲ್ಲಡೆ ಆತ್ಮನನ್ನೇ ಕಾಣುತ್ತಾರೆ. ದೇವರನ್ನು 'ನಿನಗಿಂತ ಸ್ಪಷ್ಟವಾಗಿ ನೋಡಿರುವೆ' ಎಂದು ಶ್ರೀರಾಮಕೃಷ್ಣರು ವಿವೇಕಾನಂದರಿಗೆ ಹೇಳಿದ ಮಾತಿನ ಅರ್ಥ ಇದೇ ಇರಬೇಕು. ಭಗವತ್ ಸಾಕ್ಷಾತ್ಕಾರ ಹೊಂದಿದವರು ಹಲವು ಬಾರಿ ಅಮಾನುಷವಾದ, ಸಾಮಾನ್ಯರಿಗೆ ಸಾಧ್ಯವಿಲ್ಲದ ಬೌದ್ಧಿಕ ಶಕ್ತಿ, ಮಾನಸಿಕ ಸಾಮರ್ಥ್ಯವನ್ನು ತೋರಿಸಿದ ಉದಾಹರಣೆಗಳು ಕಂಡುಬಂದಿವೆ. ಸಾಮಾನ್ಯರು ಇವುಗಳನ್ನು 'ಪವಾಡ', 'ಅತೀಂದ್ರಿಯ ಶಕ್ತಿ' ಎಂದು ವೈಭವೀಕರಿಸುತ್ತಾರೆ. ಈ ಪ್ರಪಂಚವನ್ನು ಮೀರಿಹೋಗಿ, ಸತ್ಯದ ನೈಜಸ್ವರೂಪವನ್ನು ಅರಿತವನಿಗೆ ಅಂಥ ಪವಾಡ, ಶಕ್ತಿ, ಸಿದ್ಧಿಗಳಿಂದ ಯಾವ ಲಾಭ ಬೇಕಾಗಿದೆ? ನಿತ್ಯ ಸತ್ಯವನ್ನು ಕಂಡ ಮಹಾತ್ಮನ ಅರಿವು ಎಲ್ಲ ಗೊಂದಲ, ಸಂದೇಹ, ವಿಕಲ್ಪಗಳಿಂದ ಹೊರತಾದ ಪರಿಶುದ್ಧ ಜ್ಞಾನ ಎಂಬುದೇ ಅತ್ಯಂತ ಮುಖ್ಯವಾದ ಸಂಗತಿ. **'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'** ಎಂದು ಭಗವದ್ಗೀತೆ ಹೇಳುತ್ತದೆ. ಎಲ್ಲ ಜ್ಞಾನಗಳೂ ಪವಿತ್ರ; ಅದಕ್ಕೆ ಸಮಾನವಾದ ವಸ್ತು ಬೇರೊಂದಿಲ್ಲ ಎಂದು ಈ ಮಾತಿನ ಅರ್ಥ. ಇದು ಸರಿಯಾಗಿ ಅನ್ವಯಿಸುವುದು ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನಕ್ಕೆ.

### ಪರಿಪೂರ್ಣತೆ

ದೇವರನ್ನು ಕಂಡವರು ಹೇಳುವ ಇನ್ನೊಂದು ವಿಶೇಷತೆಯೇ, ಅಲ್ಲಿ ಎಲ್ಲವೂ ಪರಿಪೂರ್ಣ ಎಂಬ ಅಂಶ. ಆತ್ಮನಿಗೆ (ಅಥವಾ ದೇವರಿಗೆ) ಹೊರತಾದ ಪ್ರತಿಯೊಂದು ವಸ್ತುವೂ ಅಪೂರ್ಣ; ವಿನಾಶವುಳ್ಳದ್ದು ಹಾಗೂ ಸೀಮಿತವಾದ್ದು. ಸದಾ ಚಲಿಸುವ ಸ್ವಭಾವವುಳ್ಳ ಪ್ರಪಂಚದ ಎಲ್ಲ ವಸ್ತುಗಳೂ ಅಪೂರ್ಣವೇ. ನಿಜವಾದ ಪರಿಪೂರ್ಣತೆ ಪರಬ್ರಹ್ಮವೊಂದೇ. ಅದನ್ನು ಅರಿತವನು, ಅಂದರೆ ಆತ್ಮಸಾಕ್ಷಾತ್ಕಾರ ಹೊಂದಿದವನು ಪರಿಪೂರ್ಣನೇ ಆಗುತ್ತಾನೆ. ಇದಕ್ಕೆ ಭಿನ್ನವಾಗಿ **'ಓಂ ಪೂರ್ಣಮದಃ ಪೂರ್ಣಮಿದಂ'** ಎಂಬ ಶಾಂತಿಮಂತ್ರದಲ್ಲಿ 'ಆ ಜಗತ್ತು ಪೂರ್ಣ, ಈ ಜಗತ್ತೂ ಪೂರ್ಣ' ಎಂದು ಹೇಳಿರುವುದನ್ನು ಇಲ್ಲಿ ಗಮನಿಸಬೇಕು. ಆ ಪಾರಮಾರ್ಥಿಕ ಜಗತ್ತು ಪರಿಪೂರ್ಣ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಜಗತ್ತನ್ನು ಪೂರ್ಣವೆಂದಿರುವುದೇಕೆ? ಲೌಕಿಕ ಜಗತ್ತು, ಲೌಕಿಕ ಸತ್ಯ – ಪೂರ್ಣ ಎಂದಾದಲ್ಲಿ ಪಾರಮಾರ್ಥಿಕವನ್ನು ಹುಡುಕಿ ಹೋಗುವ ಅಗತ್ಯವಾದರೂ ಏನಿದೆ? — ಈ ಎಲ್ಲ ಪ್ರಶ್ನೆಗಳೇಳುತ್ತವೆ. ಆದರೆ, ಪರಿಪೂರ್ಣ ಸತ್ಯದಿಂದಲೇ ಹುಟ್ಟಿದ ಈ ಜಗತ್ತು, ಆ ಸತ್ಯದ ಲಕ್ಷಣವನ್ನೇ ಹೊಂದಿದೆ; ಮಿತವಾದ, ಅಪೂರ್ಣವಾದ ಲಕ್ಷಣವೇನಿದ್ದರೂ ತೋರಿಕೆ. ನಿಜವಾಗಿ ಈ ಪ್ರಪಂಚದ ಒಳ-ಹೊರಗೆಲ್ಲ ತುಂಬಿರುವುದು ಆತ್ಮವೇ ಆಗಿದ್ದರೆ, ಅಂತಿಮವಾಗಿ ಈ ಲೋಕವೂ ಪರಿಪೂರ್ಣವೇ ಆಗಿದೆಯೆನ್ನಬೇಡವೆ? ಇಂತಹ ಸರ್ವವ್ಯಾಪಕ ಹಾಗೂ ಸಾರ್ವತ್ರಿಕ ದೃಷ್ಟಿಕೋನವನ್ನು ಹೊಂದಿದ್ದರೆ ಇಲ್ಲಿನ ವೈರುಧ್ಯ ಅಸಮಂಜಸವೆನಿಸದು. ಬ್ರಹ್ಮ ಸತ್ಯವಾಗಿದ್ದರೂ ಜಗನ್ಮಿಥ್ಯೆಯಾಗಬೇಕಿಲ್ಲ, ಬ್ರಹ್ಮವು ಸರ್ವತ್ರ ಇರುವುದರಿಂದ ಪ್ರಪಂಚದ ಒಳಹೊರಗೆ ವ್ಯಾಪ್ತವಾದ ಸತ್ಯವೇ ಆಗಿದೆಯೆನ್ನಬೇಕು. ಹೀಗೆ **'ಸರ್ವಂ ಖಲ್ವಿದಂ ಬ್ರಹ್ಮ'** ('ಈ ಎಲ್ಲವೂ ಬ್ರಹ್ಮವೇ ತಾನೆ?') ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯ ಇಲ್ಲಿ ಪ್ರಸ್ತುತವಾಗುತ್ತದೆ. ಮಿಥ್ಯೆ, ಸೀಮಿತದೃಷ್ಟಿ ಹಾಗೂ ಅಜ್ಞಾನ ಕೇವಲ ಒಂದು ಹಂತದ ಅವಸ್ಥೆ. ಅದನ್ನು ದಾಟಿ ನಿಂತಾಗ ಎಲ್ಲವೂ ಸತ್ಯವಾಗಿರುತ್ತದೆ ಎಂಬುದು ನಿಜವಾದ ವೇದಾಂತದ ದೃಷ್ಟಿ. ಇಂಥ ಜ್ಞಾನವನ್ನು ಅನುಭವವಾಗಿ ಪಡೆದ ಮಹಾತ್ಮರ ಜೀವನವೂ ಪರಿಪೂರ್ಣತೆಯಿಂದ ತುಂಬಿ ತುಳುಕಾಡಿದ್ದನ್ನು ನಾವು ಗಮನಿಸಬೇಕು.

### ಆಗಸ್ಟ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೭ | **ಮಂಗಳವಾರ** | **ಏಕಾದಶಿ** |
| ೯ | **ಗುರುವಾರ** | **ಸ್ವಾಮಿ ರಾಮಕೃಷ್ಣಾನಂದ ಜಯಂತಿ** |
| ೨೨ | **ಬುಧವಾರ** | **ಏಕಾದಶಿ** |
| ೨೬ | **ಭಾನುವಾರ** | **ಸ್ವಾಮಿ ನಿರಂಜನಾನಂದ ಜಯಂತಿ** |

---

೫. ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೩೪

೬. ಅಲ್ಲೇ ಪು. ೩೩